ಕಾಡಿನ ಕಣ್ಣು

**ಕಲೀಮ್ ಉಲ್ಲಾ**



ಹೆಣ್ಣಾನೆ ತನ್ನ ಕುಟುಂಬದೊಡನೆ ಇಡೀ ಜೀವಮಾನ ಕಳೆಯುತ್ತಾಳೆ. ಇಲ್ಲಿ ಈಕೆಯೇ ಮನೆಯೊಡತಿ. ಆಕೆಯ ನಿರ್ದೇಶನವೇ ಅಂತಿಮ. ತನ್ನ ಗಂಡು ಮರಿಗಳು ಕಿರು ಪ್ರಾಯಕ್ಕೆ ಬಂದ ತಕ್ಷಣವೇ ಒದ್ದು ಹಿಂಡಿನಿಂದ ಆಚೆ ಹಾಕಿ, ಹೆಣ್ಣು ಮಕ್ಕಳನ್ನು ಮಾತ್ರ ಜೋಪಾನ ಮಾಡುತ್ತಾಳೆ. ತಾಯಿಯ ಹಿಂಡನ್ನು ತೊರೆದು ಅಬ್ಬೇಪಾರಿಯಾಗುವ ಗಂಡು ಒಬ್ಬಂಟಿಯಾಗಿ ಅಲೆದು ಒಂಟಿ ಸಲಗ ಎಂಬ ಬಿರುದು ಗಳಿಸುತ್ತಾನೆ.



# ಪಿಸುಮಾತಿಗೆ ಕಿವಿಯಾಗುವ ಭಾವುಕಜೀವಿ

ತಮ್ಮ ಪಾಡಿಗೆ ತಾವು ಕೆಸರು ಎರಚಿಕೊಂಡು ಬಿಂದಾಸಾಗಿದ್ದ ಆನೆಗಳ ಗುಂಪು ನಮ್ಮ ಸ್ವಾಟೆ ನೋಡಿ ಒಂದು ಕ್ಷಣ ಅಲ್ಲಾಡದೆ ನಿಂತು ನಮ್ಮೆಡೆಗೆ ಗುರಾಯಿಸಿದವು. ನಮ್ಮ ಅನಿರೀಕ್ಷಿತ ಆಗಮನ ಅವಕ್ಕೆ ಇರುಸುಮುರುಸಾಗಿತ್ತು ಎಂದು ಕಾಣುತ್ತದೆ. ಅವುಗಳ ನೋಟದಲ್ಲಿ ಅದು ಎದ್ದು ಕಾಣುತ್ತಿತ್ತು. ಮನುಷ್ಯನ ಸಾಮೀಪ್ಯವನ್ನು ಕಾಡುಪ್ರಾಣಿಗಳು ಇಷ್ಟಪಡುವುದಿಲ್ಲ. ಆದರೆ, ಜಗಭಂಡರಾದ ನಾವು ಅವುಗಳನ್ನು ಪಾಲಿಸುವುದಿಲ್ಲ. ತಮ್ಮ ಪರಿಸರಕ್ಕೆ ಅಪರಿಚಿತ ಎನಿಸುವ ಯಾವ ಜೀವಿಯ ಚಲನೆ ಕಂಡರೂ ಅವು ಮುಖ ಕಿವುಚಿಕೊಳ್ಳುತ್ತವೆ. ಗಜಗಳ ಗುಣ, ಸ್ವಭಾವ ಮತ್ತು ವರ್ತನೆಗಳ ಬಗ್ಗೆ